**ಓ.ಎಸ್. ನಂ. 554/2013 ಪಿ.ಡಬ್ಲೂ-1 ಹೆಸರು - ನಾಗರಾಜು**

**ಸಾಕ್ಷಿಯನ್ನು ದಿನಾಂಕಃ 26/05/2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ. ಬಿ.ಡಿ.ಜಿ. 2 ನೇ ಪ್ರತಿವಾದಿ ಪರ ವಕೀಲರಿಂದಃ-**

ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯ ತಂದೆ ಶಿವಪ್ಪ ಮತ್ತು 2 ನೇ ಪ್ರತಿವಾದಿಯ ತಂದೆ ಕರಿಯಪ್ಪ ರವರು ಸಮನಾಗಿ ವಿಭಾಗ ಮಾಡಿಕೊಂಡು ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸರ್ವೆ ನಂಬರ್ 176/2 ಎ ಮತ್ತು 176/2 ಬಿ ಯಾರ ಹೆಸರಿನಲ್ಲಿ ಖಾತೆ ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜಿ ರಾಮಮ್ಮ ನ್ಯಾಯಾಲಯದ ಹರಾಜಿನಲ್ಲಿ ದಾವಾ ಸ್ವತ್ತನ್ನು ಕೊಳ್ಳುವ ಮುನ್ನ ಸದರಿ ಸ್ವತ್ತು ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ 258/1961 ರಲ್ಲಿ ಯಾರು ಪಕ್ಷಗಾರರು ಇದ್ದರು ಎಂದು ನನಗೆ ಗೊತ್ತಿಲ್ಲ. ನನಗೆ ದಾವಾ ಸ್ವತ್ತು ಅಲ್ಲದೆ ಬೇರೆ ಸ್ವತ್ತುಗಳು ಇವೆ. ನಮ್ಮ ಕುಟುಂಬದ ಆಸ್ತಿಗಳಲ್ಲಿ ನಾನು ಮತ್ತು ನನ್ನ ಸಹೋದರರು ವಿಭಾಗ ಮಾಡಿಕೊಂಡಿಲ್ಲ. ನನ್ನ ಅಜ್ಜಿ ದಾವಾ ಸ್ವತ್ತಿನ ಖಾತೆ ಮಾಡಿಸಿಕೊಂಡಿರಲಿಲ್ಲ. 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ವಿರುದ್ದ ಅಸಲು ದಾವಾ ಸಂಖ್ಯೆ 632/2012 ಅನ್ನು 32 ½ ಗುಂಟೆಗೆ ಮಾತ್ರ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಯರ ತಾತನ ಹೆಸರು ಬಸಪ್ಪ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 4 ರಿಂದ 11 ಯಾರು ಎಂದರೆ ಸಾಕ್ಷಿಯು ನಾವು ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ನುಡಿಯುತ್ತಾರೆ.

ನನಗೆ ದಾವಾ ಸ್ವತ್ತಿನ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಕೂಡ ಕೆ.ಐ.ಎ.ಡಿ.ಬಿ. ಇಂದ ಪರಿಹಾರದ ಹಣ ಪಡೆಯುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬೇರೆಯವರ ಚಿತಾವಣೆಯ ಮೇರೆಗೆ ಅಕ್ರಮ ಲಾಭ ಗಳಿಸುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನಾಗಲೀ ಅಥವಾ ನನ್ನಜ್ಜಿಯಾಗಲೀ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. 1998-99 ರಲ್ಲಿ 1 ನೇ ಪ್ರತಿವಾದಿಯು ದಾವಾ ಆಸ್ತಿಯ ಪೌತಿ ಖಾತೆ ಮಾಡಿಸಿಕೊಂಡಾಗ ನಾನು ತಕರಾರು ಸಲ್ಲಿಸಿರಲಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು

ನುಡಿಯುತ್ತಾರೆ. ಕಳೆದ 30 ವರ್ಷಗಳಿಂದ ದಾವಾ ಸ್ವತ್ತಿನ ಖಾತೆ ಬದಲಾವಣೆ ಆಗಿದ್ದು ನಾನು ತಕರಾರು ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ತನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನನಗೆ ಪ್ರತಿವಾದಿಯ ಕುಟುಂಬದ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಕೂಡ ತಿಳಿದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸಪ್ಪ ಮತ್ತು ಅವರ ತಮ್ಮ ಪುಟ್ಟಬಸಪ್ಪನ ನಡುವೆ ವಿಭಾಗ ವಾಗಿ ಸರ್ವೆ ನಂಬರ್ 176 ರಲ್ಲಿ ಪ್ರತಿಯೊಬ್ಬರಿಗೆ 1 ಎಕರೆ 26 ½ ಗುಂಟೆ ಬಂದಿದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಮಗೆ ಡಿಕ್ರಿಯಾಗಿದೆ ಎಂದು ನುಡಿಯುತ್ತಾರೆ. ನಮಗೆ ನ್ಯಾಯಾಲಯದಿಂದ 1 ಎಕರೆ 26 ½ ಗುಂಟೆಗೆ ಡಿಕ್ರಿಯಾಗಿದೆ. ಬಸಪ್ಪ ರವರ ಮಕ್ಕಳಾದ ಶಿವಪ್ಪ ಮತ್ತು ಕರಿಯಪ್ಪ ನ ನಡುವೆ ವಿಭಾಗವಾಗಿ ಸರ್ವೆ ನಂಬರ್ 176/2 ಎ ಮತ್ತು 176/2 ಬಿ ರಲ್ಲಿ ಕರಿಯಪ್ಪನಿಗೆ 32 ಗುಂಟೆ ಶಿವಪ್ಪ ನಿಗೆ 30 ಗುಂಟೆ ಬಂದಿದೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 176/2 ಬಿ ನಲ್ಲಿ 30 ಗುಂಟೆ ಪುಟ್ಟಬಸಪ್ಪ ರವರ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿಯಲ್ಲ. 1998-99 ರಲ್ಲಿ 1 ನೇ ಪ್ರತಿವಾದಿಯ ತಂದೆ ಶಿವಪ್ಪ ಬಿನ್ ಬಸಪ್ಪ ಸರ್ವೆ ನಂಬರ್ 176/2 ಎ ಜಮೀನಿನ ಪೌತಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದರ ನನಗೆ ಗೊತ್ತಿಲ್ಲ.

ಕೆ.ಐ.ಎ.ಡಿ.ಬಿ. ಇಂದ ಪರಿಹಾರ ಪಡೆಯಲು ಅರ್ಜಿ ಸಲ್ಲಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆ ಪರಿಹಾರ ಪಡೆದಿರಬಹುದು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ಯಾವುದೇ ರೀತಿ ಸಂಬಂಧವಿಲ್ಲದಿದ್ದರೂ ಸುಳ್ಳ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**